# ಕಾವೇರಿಯ ನೀರು ಹಂಚಿಕೆ:

# ಒಂದು ಪರ್ಯಾಯ ದೃಷ್ಟಿಕೋನ ಮತ್ತು ಮಾರ್ಗೋಪಾಯ

ಇದು ಕಾವೇರಿ ನದಿಯ ನೀರಿನ ಹಂಚಿಕೆಯ ವಿಚಾರದಲ್ಲಿ ಜನಪರ ಕಾಳಜಿ ಉಳ್ಳ ಒಂದಷ್ಟು ನಾಗರಿಕರು, ತಜ್ಞರು ಸೇರಿ ಚಿಂತನೆ ನಡೆಸಿ ನೀಡಿರುವ ಜಂಟಿ ಹೇಳಿಕೆಯಾಗಿದೆ. ಕಾವೇರಿಯ ನದಿ ನೀರು ಹಂಚಿಕೆ ವಿವಾದವು ಹಿಂಸಾತ್ಮಕ ಸ್ವರೂಪಕ್ಕೆ ತಿರುಗಿದ್ದು ನಮಗೆ ನೋವಾಗಿದೆ. ಈ ಸಮಸ್ಯೆಗೆ ಒಂದು ಬದಲಿ ದೃಷ್ಟಿಕೋನ ಮತ್ತು ಪರಿಹಾರ ಮಾರ್ಗೋಪಾಯದ ಅಗತ್ಯವಿದೆಯೆಂದು ನಾವು ಭಾವಿಸುತ್ತೇವೆ. ಈ ಪರ್ಯಾಯ ದೃಷ್ಟಿಕೋನವು ನದಿಯಲ್ಲಿ ಹರಿಯುವ ನೀರನ್ನು ಹಂಚಿಕೊಳ್ಳುವುದಕ್ಕಷ್ಟೆ ಸೀಮಿತವಾಗಬಾರದು.ಕಾವೇರಿಯ ನದಿ ಜಲಾನಯನದ ಒಟ್ಟು ಜಲ ಸಂಪನ್ಮೂಲವನ್ನು ಸಮಗ್ರವಾಗಿ ನಿರ್ವಹಣೆ ಮಾಡುವಂತಹದ್ದಾಗಿರಬೇಕು. ಸಂಪನ್ಮೂಲಗಳನ್ನು ಬಳಕೆ ಮಾಡುವಾಗ ನಮ್ಮಲ್ಲಿ ಸಮಾನತೆ, ಸುಸ್ಥಿರತೆ ಹಾಗೂ ಪ್ರಜಾಸತ್ತಾತ್ಮಕ ಆಡಳಿತದ ಕನಸಿರಬೇಕು. ಪರಿಹಾರ ಪ್ರಯತ್ನವು ಆದ್ಯತೆಗಳ ಅನುಕ್ರಮಣಿಕೆಯ ಆಧಾರಿತವಾಗಿರಬೇಕು; ನದಿ ಜಲಾನಯನದ ನೀರು, ಪರಿಸರ ಮತ್ತು ಸಾಮಾಜಿಕ ಆರ್ಥಿಕ ಪರಿಸ್ಥಿತಿಯ ವೈಜ್ಞಾನಿಕ ತಿಳುವಳಿಕೆಯ ಆಧಾರಿತವಾಗಿರಬೇಕು ಎಂದು ನಮ್ಮ ಅನಿಸಿಕೆ.

**ನೀರಿನ ಹಂಚಿಕೆಗೆ ಆದ್ಯತೆಗಳು**

- ಮೊದಲ ಆದ್ಯತೆ ಕುಡಿಯುವ ನೀರಿಗೆ: ಜಲಾನಯನದ ಜನ ಜಾನುವಾರುಗಳಿಗೆ ಕುಡಿಯಲು, ಅಡುಗೆಗೆ ಮತ್ತು ಶೌಚದ ಅಗತ್ಯಗಳಿಗೆ ಸಾಕಾಗುವಷ್ಟು ಮತ್ತು ಗುಣಮಟ್ಟದ ನೀರನ್ನು ಒದಗಿಸುವುದು ಮೊದಲ ಆದ್ಯತೆ.
- ಎರಡನೆಯ ಆದ್ಯತೆ ಪರಿಸರ ವ್ಯವಸ್ಥೆಯ ಉಳಿವು: ಜಲಚರಗಳಿಗೆ ಇತರ ಪಾರಿಸಾರಿಕ ಅಗತ್ಯಗಳಿಗಾಗಿ ಅಗತ್ಯವಿರುವಷ್ಟು ನೀರು ನದಿಯಲ್ಲಿ ಹರಿಯುವಂತೆ ನೋಡಿಕೊಳ್ಳುವುದು
- ಮೂರನೆಯದು, ಜೀನೋಪಾಯದ ಉಳಿವು: ಬಳಕೆಯಲ್ಲಿ ಸಮಾನತೆ ಮತ್ತು ಸಾರ್ವಜನಿಕ ಆರೋಗ್ಯವನ್ನು ಕಾಯ್ದುಕೊಂಡು ಉತ್ಪಾದನಾ ಚಟುವಟಿಕೆಗಳಿಗೆ ಅನುವು ಮಾಡಿಕೊಡುವುದು ಮತ್ತು
- ನಾಲ್ಕನೆಯದಾಗಿ, ಬದಲಾವಣೆಗಳಿಗೆ ಹೊಂದಾಣಿಕೆ: ಬದಲಾಗುತ್ತಿರುವ ಜನಸಂಖ್ಯೆ, ಆರ್ಥಿಕತೆ, ಭೂಬಳಕೆ ಮತ್ತು ಹವಾಮಾನ ಬದಲಾವಣೆಗೆಳಿಗೆ ಹೊಂದಾಣಿಕೆ ಮಾಡಿಕೊಳ್ಳುವಷ್ಟು, ಅಂತಹ ಬದಲಾವಣೆಗಳನ್ನು ನಿಭಾಯಿಸಿಕೊಳ್ಳುವಷ್ಟು ನೀರನ್ನು ಕಾದಿರಿಸಿಕೊಳ್ಳುವುದು.

**ಸಮಾಜೋ-ಜಲವಿಜ್ಞಾನದ ವೈಜ್ಞಾನಿಕ ಹಾಗೂ ಗಟ್ಟಿ ತಿಳುವಳಿಕೆ:**

- ಮೇಲ್ಜಲ ಮತ್ತು ಅಂತರ್ಜಲಗಳ ಹರಿವು ಪರಸ್ಪರ ಸಂಬಂಧಿತವಾಗಿದೆ ಹಾಗೂ ಅವುಗಳನ್ನು ಹಾಗೆಂದೇ ಪರಿಗಣಿಸಬೇಕು.
- ಭೂ ಬಳಕೆಯ ಬದಲಾವಣೆ, ಅಂತರ್ಜಲವನ್ನು ಎತ್ತುವುದು, ಮತ್ತು ನೀರನ್ನು ತಿರುಗಿಸುವ ಪ್ರಯತ್ನಗಳೆಲ್ಲವೂ ನದಿಯ ಹರಿವನ್ನು ಪ್ರಭಾವಿಸುತ್ತವೆ. ಆದುದರಿಂದ ನದಿಯಲ್ಲಿ ಹರಿಯುವ ನೀರು ಮಾತ್ರವಲ್ಲದೆ ಎಲ್ಲ ನೀರಿನ ಬಳಕೆಯ ಸಮಾನತೆಗೆ ಗಮನ ಕೊಡಬೇಕಾಗಿದೆ.
- ಮುಂಗಾರು, ಹಿಂಗಾರು ಮಳೆಗಳ ವ್ಯತ್ಯಾಸವೂ ಸೇರಿದಂತೆ ನದಿ ಜಲಾನಯನದಲ್ಲಿ ವರ್ಷದಿಂದ ವರ್ಷಕ್ಕೆ ಅನೇಕ ರೀತಿಯ ಏರುಪೇರುಗಳಾಗುತ್ತಿದ್ದು, ಕೊರತೆಯ ವರ್ಷ ಎಂಬುವುದನ್ನು ಮರು

ವ್ಯಾಖ್ಯಾನಿಸಬೇಕು. ಇದನ್ನು ಎದುರಿಸುವ ಮಾರ್ಗೋಪಾಯಗಳನ್ನು ಕೂಡ ಮರು ವ್ಯಾಖ್ಯಾನಿಸಬೇಕಾಗಿದೆ. ಕೊರತೆಯ ಪ್ರಮಾಣಕ್ಕೆ ಅನುಪಾತವಾಗಿ ಹಂಚುವ ವಿಚಾರವನ್ನೂ ಮರು ಚಿಂತಿಸಬೇಕು.

- ಹವಾಮಾನ ಬದಲಾವಣೆಯಿಂದಾಗುವ ಏರಿಳಿತ ಮತ್ತು ಅನಿಶ್ಚಿತತೆಯ ಕಾರಣದಿಂದ ಹಂಚುವುದಕ್ಕೆ ಲಭ್ಯವಿರುವ ಪ್ರಮಾಣವನ್ನು ೭೫% ವಿಶ್ವಾಸಾರ್ಹತೆಯ ಮೇಲೆ ಆಯ್ಕೆ ಮಾಡುವುದು ಸೂಕ್ತ. ಹಾಗೂ ನೀರಿನ ಹಂಚಿಕೆಗೆ ವರ್ಷವನ್ನು ಪರಿಗಣಿಸುವ ಬದಲು ಅದಕ್ಕಿಂತ ಕಡಿಮೆ ಕಾಲಾವಧಿಯನ್ನು ಪರಿಗಣಿಸಬಹುದು.

**ನೀರಿನ ಹಂಚಿಕೆಯನ್ನು ತೀರ್ಮಾನ ಮಾಡಲು ಪಾಲ್ಗೊಳ್ಳುವಿಕೆಯ ಮತ್ತು ಪಾರದರ್ಶಕವಾದ ವ್ಯವಸ್ಥೆ**

- ಕಾವೇರಿಯ ನೀರನ್ನು ಹಂಚಿಕೆ ಮಾಡುವುದನ್ನು ಒಂದು ಕೇಂದ್ರೀಕೃತವಾದ ರಾಜಕೀಯ ಮತ್ತು ಅಧಿಕಾರಶಾಹಿ ಪ್ರಕ್ರಿಯೆಗೆ ಬಿಟ್ಟುಬಿಡಲು ಸಾಧ್ಯವಿಲ್ಲ. ನೀರಿನ ಆಡಳಿತವು ಪ್ರಜಾಸತ್ತಾತ್ಮಕ, ವಿಕೇಂದ್ರೀಕೃತ ಮತ್ತು ಜನರ ಸಹಭಾಗಿತ್ವದ ಸ್ವರೂಪದ್ದಾಗಿರಬೇಕು.
- ನೀರಿಗೆ ಸಂಬಂಧಪಟ್ಟಂತೆ ಮಳೆಯ ಪ್ರಮಾಣ, ಹರಿದು ಹೋಗುವ ನೀರು, ಬಾಷ್ಪೀಕರಣ, ಶೇಖರಿಸಲ್ಪಟ್ಟ ಮೇಲ್ಜಲ ಮತ್ತು ಅಂತರ್ಜಲ ಪ್ರಮಾಣ ಹಾಗೂ ತೆಗೆದಿರುವ ನೀರು, ಭೂ ಬಳಕೆ ಮತ್ತು ಬೆಳೆಗಳು ಮುಂತಾದ ಸಾರ್ವಜನಿಕ ಹಣ ಬಳಸಿ ಯಾವುದೇ ಸಂಸ್ಥೆಗಳು ಸಂಗ್ರಹಿಸಿವ ಮಾಹಿತಿ ,ಮತ್ತು ಅಂಕಿ ಅಂಶಗಳು ಸಾರ್ವಜನಿಕರಿಗೆ ಲಭ್ಯವಿರಬೇಕು.
- ಈ ಮಾಹಿತಿಗಳನ್ನು ವಿವಿಧ ಮಟ್ಟಗಳಲ್ಲಿ ಅಂದರೆ ಹಳ್ಳಿ ಪಟ್ಟಣ, ತಾಲೂಕು, ಜಿಲ್ಲೆ, ರಾಜ್ಯ ಮತ್ತು ನದಿ ಜಲಾನಯನ ಮಟ್ಟದಲ್ಲಿ ವಿಶ್ಲೇಷಣೆ ಮಾಡಬೇಕು ಮತ್ತು ಈ ವಿಶ್ಲೇಷಣೆಯನ್ನು ಜನ ಸಾಮಾನ್ಯರಲ್ಲಿ ಹಂಚಿಕೊಳ್ಳಬೇಕು. ಈ ಪ್ರಕ್ರಿಯೆಯಲ್ಲಿ ನಾಗರಿಕರು, ಸಂಘ ಸಂಸ್ಥೆಗಳು, ಸಂಶೋಧನ ಸಂಸ್ಥೆಗಳು ಮತ್ತು ಸರಕಾರಿ ಸಂಸ್ಥೆಗಳು ಸಹಯೋಗ ನೀಡುವಂತಾಗಬೇಕು.

ಹೆಚ್ಚಿನ ಮಳೆಯಾಗುವ ಘಟ್ಟ ಪ್ರದೇಶದಲ್ಲಾಗಲೀ, ಅಥವಾ ನದಿ ಮುಖಜ ಭೂಮಿಯಲ್ಲಾಗಲೀ ಹಿಂದಿನಿಂದಲೂ ರೂಢಿಸಿಕೊಂಡು ಬಂದಿರುವ ಜೀವನೋಪಾಯ - ಕೃಷಿ ಪದ್ಧತಿಗಳನ್ನು ಬದಲಾಯಿಸುವುದು ಅಷ್ಟು ಸುಲಭವಲ್ಲವೆಂದು ನಾವು ಒಪ್ಪುತ್ತೇವೆ. ಆದರೂ ಕಳದೊಂದು ಶತಮಾನದಲ್ಲಿ ಕಾವೇರಿ ನದಿ ಜಲಾನಯನದಲ್ಲಿ ತಾಂತ್ರಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಅನೇಕ ಬದಲಾವಣೆಗಳಾಗಿವೆ.ಜನಸಂಖ್ಯೆಯಲ್ಲೂ ಏರಿಕೆಯಾಗಿದೆ. ನದಿಯ ಮತ್ತು ನೀರಿನ ಮೇಲಿನ ಅತಿಯಾದ ಒತ್ತಡದಿಂದ ಸುಸ್ಥಿರವಲ್ಲದ, ಅಸಮಾನತೆಯುಳ್ಳ ನೀರಿನ ಬಳಕೆಯ ಕ್ರಮ ಬೆಳೆದು ಬಂದಿದ್ದು ಇದು ಹೀಗೇ ಮುಂದುವರೆಯಲು ಸಾಧ್ಯವಿಲ್ಲ. ಆದುದರಿಂದ ನೀರನ್ನು ನಿರ್ವಹಣೆ ಮಾಡುವ, ಸಂರಕ್ಷಿಸುವ, ಮರು ಬಳಕೆ ಮಾಡುವ, ಮರು ಹಂಚಿಕೆ ಮಾಡುವ ಸುದೀರ್ಘ ಪ್ರಯತ್ನಕ್ಕೆ ಜೊತೆಗೂಡುವುದು ಅನಿವಾರ್ಯ.

ಈ ಹೇಳಿಕೆಗೆ ಸಹಿ ಮಾಡಿರುವ ನಾವು ಭಿನ್ನ ಭಿನ್ನ ಕಾರ್ಯ ಕ್ಷೇತ್ರಗಳಿಂದ ಬಂದವರಾಗಿದ್ದೇವೆ. ವಿಜ್ಞಾನ, ಸಮಾಜ ವಿಜ್ಞಾನ, ಇಂಜಿನಿಯರಿಂಗ್, ಕಾನೂನು ಮತ್ತು ನೀತಿಗಾಗಿ ವಕಾಲತ್ತು ನಡೆಸುವವರು, ಸಮುದಾಯ ಸಂಘಟನೆಗಳಿಂದ ಬಂದವರು, ಪತ್ರಿಕೋದ್ಯಮ, ಜನವಿಜ್ಞಾನ ಚಳುವಳಿಯಲ್ಲಿರುವವರು ಇದ್ದೇವೆ.ಕಾವೇರಿ ನದಿ ನೀರನ್ನು ಹಂಚಿಕೊಳ್ಳುವುದು ಕೇವಲ ರಾಜಕೀಯ, ಆಡಳಿತಾತ್ಮಕ ಮತ್ತು ತಾಂತ್ರಿಕ ಸವಾಲಿನ ವಿಷಯವಲ್ಲ, ಇದು ಇಡೀ ನದಿ ಜಲಾನಯನದ ಬಗೆಗೆ ಕನಸನ್ನು ಹೊಂದಿರುವ,

ಸಂಘರ್ಷವನ್ನು ಸಹಕಾರವನ್ನಾಗಿ ಬದಲಾಯಿಸುವ ಮಾಹಿತಿಪೂರ್ಣ ಸಾರ್ವಜನಿಕ ಹುಡುಕಾಟ ಆಗಬೇಕಾಗಿದೆ. ಕಾವೇರಿ ನೀರನ್ನು ಹಂಚಿಕೊಳ್ಳುವುದರ ಕುರಿತ ರಾಜಕೀಯ, ಕಾನೂನಾತ್ಮಕ ಮತ್ತು ಆಡಳಿತಾತ್ಮಕ ಕ್ರಮಗಳಲ್ಲಿ ಇಲ್ಲಿ ಪ್ರಸ್ತಾಪಿಸಿರುವಂತಹ ದೃಷ್ಟಿಕೋನ, ತತ್ವ ಮತ್ತು ಪ್ರಕ್ರಿಯೆಗಳು ಅಳವಡಿಸಲ್ಪಡುತ್ತವೆ ಎಂದು ಆಶಿಸುತ್ತೇವೆ. ಮತ್ತು ಪ್ರಜಾಸತ್ತಾತ್ಮಕವಾದ, ಪಾರದರ್ಶಕವಾದ ಜನಸಂಬಂಧ ಜಾಲ ವಿಸ್ತರಣೆಗೊಳ್ಳುತ್ತದೆ ಹಾಗೂ ಈ ತತ್ವ ವಿಚಾರಗಳು ಇತರ ನದಿ ಜಲಾನಯನಗಳಿಗೂ ವಿಸ್ತರಿಸಲ್ಪಡುತ್ತವೆ ಎಂದು ಆಶಿಸುತ್ತೇವೆ.

**ಸಹಿ ಮಾಡಿರುವವರು:**

| | |
|---|---|
| ಜಾಯ್ ಕೆ.ಜೆ.,SOPPECOM/ಫೋರಮ್ | ಸುಮಿ ಕೃಷ್ಣ, ಸ್ವತಂತ್ರ ಸಂಶೋಧಕರು |
| ಶರಚ್ಚಂದ್ರ ಲೇಲೆ, ATREE | ಜನಕರಾಜನ್, ಎಸ್., MIDS |
| ಪರಮೇಶ್ವರನ್ ಎಮ್.ಪಿ., KSSP | ರಘು ಮೆನನ್, CERD/AIPSN |
| ಜಗದೀಶ್ ಕೃಷ್ಣಮೂರ್ತಿ, ATREE | ವೀಣಾ ಶ್ರೀನಿವಾಸನ್, ATREE |
| ಶ್ರೀಪಾದ ಧರ್ಮಾಧಿಕಾರಿ, ಮಂಥನ್/ಫೋರಮ್ | ವೈದ್ಯನಾಥನ್ ಎ., ಸ್ವತಂತ್ರ ಸಂಶೋಧಕರು |
| ಬಾಲಾಜಿ ನರಸಿಂಹನ್, IITM | ಶೇಖರ್ ಮುದ್ದು, IISc |
| ನರೇಂದ್ರ ಪಾಣಿ, NIAS | ಹಿಮಾಂಶು ಥಕ್ಕರ್, SANDRP |
| ಶಕ್ತಿವೇಲು, TNDALU | ನಿತ್ಯಾನಂದ ಜಯರಾಮನ್, ಚೆನ್ನೈ ಸಾಲಿಡಾರಿಟಿ ಗ್ರೂಪ್ |
| ಪ್ರಕಾಶ್ ವಿ.ಎಸ್.,IIITB | ಟಿ.ಎನ್.ಪ್ರಕಾಶ್ ಕಮ್ಮರಡಿ,ಕರ್ನಾಟಕ ಕೃಷಿ ಬೆಲೆ ಆಯೋಗ |
| ರಾಜೇಂದ್ರ ವೈ.ಜೆ., PUCL | ಶಾಂತ ಮೋಹನ್, NIAS |
| ರವಿ ಭಲ್ಲ, FERAL | ರವಿ ಎಸ್. ಪಿ., ನದಿ ಸಂಶೋಧನ ಸಂಸ್ಥೆ |
| ರಮೇಶ್.ಎಮ್.ಕೆ., NLSIU | ಭಾರತಿ ಕಣ್ಣನ್, ಕಾಮನ್ ಫ್ಲಾಟ್ ಫಾರಂ ಫಾರ್ ವಾಟರ್ |
| ದೇವಿಕ ದೇವಯ್ಯ, ಸೇವ್ ರಿವರ್ ಕಾವೇರಿ | ಚಂದ್ರಶೇಖರ್ ಆರ್.ಸಿ., PUCL |
| ನಿಸರ್ಗ ಪ್ರಕಾಶ್, NCF | ಸಬ್ಯಸಾಚಿ ಚಟರ್ಜಿ, AIPSN |
| ಪ್ರಿಯಾಂಕ ಜಾಮ್ವಾಲ್, ATREE | ಪ್ರಜ್ವಲ್ ಶಾಸ್ತ್ರಿ, AIPSN |
| ಸುಮನ್ ಜುಮಾನಿ, FERAL | ಶ್ರೀನಿವಾಸ್ ಬಡಿಗೇರ್, ATREE |
| ವೀಡಾ ನೂಪುರ,ರಾಷ್ಟ್ರೀಯ ಕಾನೂನು ಶಾಲೆ | ಸುಪ್ರಭ ಶೇಷನ್, ಗುರುಕುಲ ಬೊಟಾನಿಕಲ್ ಸ್ಯಾಂಕ್ಚುರಿ |
| ಬಿಜಾಯ್ ಕೆ.ಥಾಮಸ್, ATREE | ಅನಿತ ಬಸವಯ್ಯ, ಸಾಫ್ಟ್ ವೇರ್ ತಂತ್ರಜ್ಞರು |
| ಲಿಯೋ ಸಲ್ಡಾನ, ಪರಿಸರ ಬೆಂಬಲ ಗುಂಪು | ತರುಣ್ ನಾಯರ್, ATREE |
| ಶ್ರೀನಿವಾಸ್ ಚೊಕ್ಕಕುಲ, CPR | ಜಯಕುಮಾರ್ ಎಚ್.ಎಸ್., ಬಿ.ಜಿ.ವಿ.ಎಸ್.ಕರ್ನಾಟಕ |
| ಅರ್ಪಿತ ನೆಹ್ರಾ, ATREE | ಮೇರಿ ಅಬ್ರಹಾಂ, TERI |
| ಅಪೂರ್ವ ಆರ್., ATREE | ನಕುಲ್ ಹೆಬ್ಬೆ, ATREE |
| ಸಾಯನ್ ರಾಯ್, ATREE | ಶ್ರೀನಿವಾಸ್ ವೈದ್ಯನಾಥನ್, FERAL |

*ಕನ್ನಡಕ್ಕೆ: ಜನಾರ್ದನ ಕೆಸರಗದ್ದೆ*